ಬೆಳಗಾವಿ ಜಿಲ್ಲೆಯ ಸಣ್ಣ ರೈತರಿಗೆ ಸೌಲಭ್ಯ ಕುರಿತು

75 (655) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ–ಸದಲಗ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಬಜೆಟ್‌ನಲ್ಲಿ ಘೋಷಿಸಿದಂತೆ ರಾಜ್ಯದ ಎಷ್ಟು ಫಲಾನುಭವಿಗಳಿಗೆ (ಸಣ್ಣ ರೈತರಿಗೆ) ಬೀಜ, ಗೊಬ್ಬರಕೊಳ್ಳಲು ಸಹಾಯ ಧನ ನೀಡಲಾಗಿದೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಈ ಸೌಲಭ್ಯ ದೊರೆತಿದೆ; ಈ ಫಲಾನುಭವಿಗಳ ಆಯ್ಕೆಗಿರುವ ಮಾನದಂಡ ಗಳೇನು?

ಆ) ಈ ಯೋಜನೆ ಅಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಆಯ್ಕೆ ಮಾಡಲಾಗಿರುವ ಫಲಾನುಭವಿಗಳೆಷ್ಟು; (ವಿಧಾನ ಸಭೆ ಕ್ಷೇತ್ರವಾರು ವಿವರ ನೀಡುವುದು)?

ಇ) ಇನ್ನೂ ಎಷ್ಟು ಫಲಾನುಭವಿಗಳಿಗೆ ಈ ಸೌಲಭ್ಯ ದೊರೆಯ ಬೇಕಾಗಿದೆ; ಅವರಿಗೆ ಇನ್ನೂ ಸಹಾಯ ಧನ ವಿತರಿಸದಿರಲು ಕಾರಣವೇನು; (ವಿವರ ನೀಡುವುದು)?

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ಬಜೆಟ್‌ನಲ್ಲಿ ಘೋಷಿಸಿದಂತೆ ಒಟ್ಟು ರಾಜ್ಯದಲ್ಲಿ 19,85,500 ಫಲಾನುಭವಿಗಳಿಗೆ (ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ) ಬೀಜ, ಗೊಬ್ಬರಕೊಳ್ಳಲು ಸಹಾಯ ಧನ ನೀಡಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 1,11,095 ಫಲಾನುಭವಿಗಳಿಗೆ ಈ ಸೌಲಭ್ಯ ದೊರೆತಿದೆ. (ವಿವರಗಳು ಅನುಬಂಧದಲ್ಲಿ ನೀಡಲಾಗಿದೆ).

ಸಂಪೂರ್ಣವಾಗಿ ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯ ಧನ ನೀಡಲಾಗಿದೆ.

ಆ) ಈ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ 1,26,440 ಫಲಾನುಭವಿಗಳನ್ನು ಆಯ್ಕೆ ಮಾಡಿದೆ. (ವಿಧಾನಸಭಾ ಕ್ಷೇತ್ರವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಇ) ಇನ್ನು 15345 ಫಲಾನುಭವಿಗಳಿಗೆ ಈ ಸೌಲಭ್ಯ ದೊರೆಯ ಬೇಕಾಗಿದೆ. ಕಾರಣಗಳು (ಅನುಬಂಧದಲ್ಲಿ ನೀಡಲಾಗಿದೆ).

ಅನುಬಂಧ

ಸಂಪೂರ್ಣವಾಗಿ ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳಿಗೆ ತಲಾ ರೂ. 1000-00 ವಿಧಾನಸಭಾ ಮತಕ್ಷೇತ್ರವಾರು ಫಲಾನುಭವಿಗಳಿಗೆ ವಿತರಣೆಯಾದ ಸಹಾಯಧನದ ವಿವರ.

ಅನಂ	ಮತಕ್ಷೇತ್ರದ ಹೆಸರು	ಒಟ್ಟು ಫಲಾನುಭವಿಗಳ ಸಂಖ್ಯೆ	ಸಹಾಯಧನದ ವಿತರಣೆ ಮಾಡಿದ ಫಲಾನುಭವಿಗಳ ಸಂಖ್ಯೆ	ಸಹಾಯ ಧನ ವಿತರಣೆಯಾಗದ ಫಲಾನುಭವಿಗಳ ಸಂಖ್ಯೆ	ಷರಾ
1	ಅಥಣಿ	6295	5051	1244	ಹಲವರು ಮೃತರಾಗಿದ್ದು ಬೇರೆಡೆಗೆ ವಲಸೆಹೋಗಿದ್ದು ವಾರಸುದಾರರು ಲಭ್ಯವಿಲ್ಲದ ಕಾರಣ ವಿತರಣೆಯಾಗಿರುವದಿಲ್ಲ.
2	ಕಾಗವಾಡ	5961	4355	1606	
3	ಬೈಲಹೊಂಗಲ	14225	13098	1127	ಮೃತಪಟ್ಟವರು / ಊರುಬಿಟ್ಟು ಹೋದವರು.
4	ಕಿತ್ತೂರ	16145	16145	0	-
5	ಬೆಳಗಾವಿ (ಉತ್ತರ)	0	0	0	ರೈತರು ಊರುಬಿಟ್ಟು ಹೋಗಿರುವ /ಮರಣ ಹೊಂದಿದ್ದು ಹಾಗೂ ರೈತರ ಹೆಸರು ತಿದ್ದುಪಡಿ ಇರುವುದರಿಂದ ಸದರಿ ಬೆಳ್ ತಿದ್ದುಪಡಿ ಮಾಡುವ ಹಂತದಲ್ಲಿದೆ.
6	ಬೆಳಗಾವಿ (ದಕ್ಷಿಣ)	4340	1676	2664	
7	ಬೆಳಗಾವಿ ಗ್ರಾಮೀಣ	10162	9102	1060	
8	ಬೆಳ್ಳೂಡಿ/ಸದಲಗಾ	4138	3427	711	ಅರ್ಹಫಲಾನುಭವಿಗಳು ಮೃತವಾದ್ದರಿಂದ ಹಾಗೂ ಜಂಟಿ ಖಾತೆ ಹೊಂದಿರುವದರಿಂದ ಸದರಿಯವರಿಗೆ ವಾರಸಾ ಮಾಡಿಕೊಳ್ಳಲು ಹಾಗೂ ಒಪ್ಪಿಗೆ ಪತ್ರ ಸಲ್ಲಿಸಲು ತಿಳಿಸಲಾಗಿದ್ದು ವಿತರಣೆ ಕಾರ್ಯಪ್ರಗತಿಯಲ್ಲಿದೆ.
9	ನಿಪ್ಪಾಣಿ	2393	2269	124	
10	ಗೋಕಾಕ	2008	2008	0	
11	ಅರಭಾವಿ	2766	2766	0	
12	ಹುಕ್ಕೇರಿ	5349	4559	790	ಸ್ಥಳಾಂತರ / ಮೃತ/ವಾರಸುದಾರರು ಇಲ್ಲದಿರುವದರಿಂದ ಸಹಾಯಧನ ವಿತರಣೆಯಾಗಿರುವದಿಲ್ಲ.
13	ಯಮಕನಮರಡಿ	11481	9553	1928	
14	ಬಾಸಾಪೂರ	3655	2396	1259	ಸದರಿ ಫಲಾನುಭವಿಗಳು ತಮ್ಮ ಹೊಟ್ಟೆ ಪಾಡಿಗಾಗಿ ಬೆರೆ ರಾಜ್ಯಗಳಿಗೆ ಹೋಗಿರುತ್ತಾರೆ./ಖಾತೆ ಬದಲಾವಣೆ ಆಗಿರುವದಿಲ್ಲ ಕಾರಣ ವಿಳಂಬ ವಾಗಿರುತ್ತದೆ
15	ರಾಯಬಾಗ	8413	7736	677	ಮೃತ ಖಾತೆದಾರರು/ವಾರಸುದಾರರು ಬೇರೆರಾಜ್ಯಕ್ಕೆ ಕೂಲಿಮಳೆಲಸಕ್ಕೆ ಗುಳೆಹೋಗಿರುತ್ತಾರೆ.
16	ಕುಡಚಿ	115	108	7	ಮೃತ ಖಾತೆದಾರರು/ವಾರಸುದಾರರು ಬೇರೆರಾಜ್ಯಕ್ಕೆ ಕೂಲಿಮಳೆಲಸಕ್ಕೆ ಗುಳೆಹೋಗಿರುತ್ತಾರೆ.
17	ರಾಮದುರ್ಗ	20279	20210	69	ಫಲಾನುಭವಿಗಳು ಊರಿಲ್ಲಿ ಇರುವದಿಲ್ಲ. ಕೆಲವು ರೈತರು ಮೃತರಾಗಿರುತ್ತಾರೆ.
18	ಸೌಂದತ್ತಿ	8715	6636	2079	ಮೃತಪಟ್ಟಿದ್ದು ಹಾಗೂ ಊರು ಬಿಟ್ಟು ಹೋಗಿರುವರು
	ಒಟ್ಟು	126440	111095	15345	

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ ಸಣ್ಣ ರೈತರಿಗೆ 1,26,440 ಜನರನ್ನು ಗುರುತು ಮಾಡಿ, 1,11,000 ಜನರಿಗೆ ನೀವು ಈಗಾಗಲೇ ಸಹಾಯಧನ ವಿತರಣೆ ಮಾಡಿದ್ದೀರಿ. ಆದರೆ, ಇನ್ನೂ 15,345 ಫಲಾನುಭವಿಗಳಿಗೆ ಸಹಾಯಧನವನ್ನು ನೀವು ವಿತರಣೆ ಮಾಡಬೇಕಾಗಿದೆ. ನೀವು ಉತ್ತರದಲ್ಲಿ ಏನು ಕೊಟ್ಟಿದ್ದೀರಿ ಎಂದರೆ, ಈ 15 ಸಾವಿರ ರೈತರಿಗೆ ಏಕೆ ಕೊಡುವುದಕ್ಕೆ ಆಗಿಲ್ಲವೆಂದರೆ, ಅವರು ಊರು ಬಿಟ್ಟುಹೋಗಿದ್ದಾರೆ ಹಾಗೂ ಕೆಲವರು ಮರಣ ಹೊಂದಿದ್ದಾರೆ ಎಂದು ಉತ್ತರ ಕೊಟ್ಟಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಊರು ಬಿಟ್ಟು ಹೋದಂತಹ ಪರಿಸ್ಥಿತಿ ಇಲ್ಲ. ಏಕೆಂದರೆ, ನಮ್ಮ ಪ್ರದೇಶಕ್ಕೆ ಹತ್ತಿರದಲ್ಲಿ ಬೆಂಗಳೂರು ಅಥವಾ ಮೈಸೂರು ಸಿಟಿ ಬರುವುದಿಲ್ಲ. ರೈತರು ಹಳ್ಳಿಯಲ್ಲೇ ಜೀವನ ಮಾಡಬೇಕಾಗುತ್ತದೆ. ಜಮೀನನ್ನು ಅವಲಂಬಿಸಿಯೇ ಇವತ್ತು ಬೆಳೆಯನ್ನು ಬೆಳೆಯಬೇಕು. ನಿನ್ನೆ ಉತ್ತರದಲ್ಲಿ ಮಾನ್ಯ ಕಟ್ಟಾ ಸುಬ್ರಹ್ಮಣ್ಯರವರು ಹಳ್ಳಿಗಳಿಂದ ಜನ ಬೆಂಗಳೂರಿಗೆ ವಲಸೆ ಬರುತ್ತಿದ್ದಾರೆ ಎದು ಹೇಳಿದರು. ಆ ರೀತಿಯ ಪರಿಸ್ಥಿತಿ ನಮ್ಮಲ್ಲಿ ಇಲ್ಲ. ದಯವಿಟ್ಟು ಈ ರೀತಿಯ ಉತ್ತರಗಳನ್ನು ನೀವು ನೀಡಬಾರದು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಒದು ವರ್ಷವಾಯಿತು. ಕಳೆದ ವರ್ಷ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸಣ್ಣ ರೈತರಿಗೆ ಅನುಕೂಲ ವಾಗಲಿ ಎಂದು ಬೀಜ ಮತ್ತು ಗೊಬ್ಬರಗಳನ್ನು ಖರೀದಿಸುವುದಕ್ಕೆ ಎಂದು ಒಂದು ಸಾವಿರ ರೂಪಾಯಿಗಳ ಧನಸಹಾಯವನ್ನು ಕೊಟ್ಟಿದ್ದರು. ಅವರು ಮರಣ ಹೊಂದಿದ್ದಾರೆ ಎಂದು ಹೇಳುವುದು ಸರಿಯಲ್ಲ.

ನಮ್ಮ ಹೆಸರಿನಲ್ಲಿ ಕಾಗದ ಪತ್ರಗಳನ್ನು ಮಾಡಿಕೊಡಬೇಕೆಂದು ಅಪ್ಪ ಸಾಯುವ ಮುನ್ನ ಮಕ್ಕಳು ಆತನ ಬೆನ್ನತ್ತುತ್ತಾರೆ! ಅವರು ಸತ್ತ ಮೇಲೆ ಬೇರೆ ವಿಷಯ. ಇನ್ನೊಂದು ವಿಷಯದ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಈ ಕಾರ್ಯಕ್ರಮವನ್ನು ಈ ವರ್ಷವೂ ಮುಂದುವರೆಸುತ್ತೀರೋ? ಇಲ್ಲವೋ? ಈ ಕಾರ್ಯಕ್ರಮ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿತ್ತು. ಇದರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ಮಾನ್ಯ ಕೃಷಿ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಸುಮಾರು 54 ಲಕ್ಷದಷ್ಟಿದ್ದಾರೆ. ನಾವು 198.55 ಫಲಾನುಭವಿಗಳಿಗೆ ಹಣ ಖರ್ಚು ಮಾಡಿದ್ದೇವೆ. ಅಂದರೆ, 500 ಕೋಟಿ ರೂ.ಹಣ ಕೊಡಲಾಗಿತ್ತು. ಇದೇ ರೀತಿ ಬೆಳಗಾಂ ಜಿಲ್ಲೆಗೆ ಬಿಡುಗಡೆಯಾದ ಅನುದಾನ 11.77 ಕೋಟಿ ಮತ್ತು ವೆಚ್ಚ ಮಾಡಿದ ಅನುದಾನ 11.10 ಕೋಟಿ, ಬಾಕಿ 1.67 ಕೋಟಿ ಇದ್ದು, ಈಗಲೂ ಸರಿಯಾದ ದಾಖಲಾತಿಗಳಿದ್ದಲ್ಲಿ, ಅವರಿಗೆ ಹಣ ಕೊಡುವ ವ್ಯವಸ್ಥೆ ಮಾಡಲಾಗುವುದು.

ಯಶಸ್ವಿನಿ ಆರೋಗ್ಯ ವಿಮಾ ಯೋಜನೆ

52 (950) ಶ್ರೀ ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯ ಟ್ರಸ್ಟಿಗಳ ಹೆಸರೇನು? ಅವರ ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಟ್ರಸ್ಟಿಗಳ ಅವಧಿ ಎಷ್ಟು; ಈ ಟ್ರಸ್ಟಿಗಳನ್ನು ಯಾರು ನಿಯಮಿಸುತ್ತಾರೆ;

ಆ) ಈ ಯೋಜನೆಯಲ್ಲಿ ಕೈಗೊಳ್ಳುವ ಶಸ್ತಚಿಕಿತ್ಸೆಗಳ ಹೆಸರೇನು; ಪ್ರತಿಯೊಂದು ಶಸ್ತಚಿಕಿತ್ಸೆಗೆ ನಿಗದಿಯಾದ ಹಣವೆಷ್ಟು; ಇದು ಎಂದು ನಿಗದಿಯಾಗಿದೆ;

ಇ) ಕಳೆದ 7 ವರ್ಷಗಳಲ್ಲಿ ಎಷ್ಟು Cardiology, Neurology, Orthopedic, Renal, Urological, Pediatric ಶಸ್ತಚಿಕಿತ್ಸೆ ನಡೆಸಲಾಗಿದೆ. ಈ ಬಗ್ಗೆ ವಿವಿಧ ಆಸ್ಪತ್ರೆಗಳಿಗೆ ಎಷ್ಟು ಹಣ ಸಂದಾಯ ಮಾಡಲಾಗಿದೆ;

ಈ) ಈ ಯೋಜನೆ ಕೇವಲ ಶಸ್ತ ಚಿಕಿತ್ಸೆಗಾಗಿ ಮೀಸಲಾಗಿದ್ದರೂ ಕೂಡ Neo-natal care ಗಾಗಿ ಈ ಯೋಜನೆ ಏಕೆ ವಿಸ್ತರಿಸಲಾಯಿತು ಮತ್ತು ಹೊಸದಾಗಿ Neo-natal care ಗೆ ಮಾತ್ರ ಏಕೆ ಹೆಚ್ಚಿಸಲಾಯಿತು.

ಉ) ಕಳೆದ 7 ವರ್ಷಗಳಲ್ಲಿ ನಾರಾಯಣ ಹೃದಯಾಲಯ ಬೆಂಗಳೂರು ಮತ್ತು ಅಶ್ವಿನಿ ಚಿಕ್ಕಮಕ್ಕಳ ಆಸ್ಪತ್ರೆ ಬಿಜಾಪುರಕ್ಕೆ ಎಷ್ಟು ಹಣ ಸಂದಾಯ ಮಾಡಲಾಗಿದೆ; ಪ್ರತಿ ವರ್ಷದ ಮಾಹಿತಿಯನ್ನು ಬೇರೆ ಬೇರೆಯಾಗಿ ನೀಡುವುದು;